ಪಶು ಆಸ್ಪತ್ರೆಗಳು

477 (739) ಶ್ರೀ ಶ್ರೀನಿವಾಸ್ ಎಂ. (ಮಂಡ್ಯ):– ಮಾನ್ಯ ಪಶುಸಂಗೋಪನಾ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಮಂಡ್ಯ ಜಿಲ್ಲೆಯಲ್ಲಿರುವ ಪಶು ಆಸ್ಪತ್ರೆಗಳ ಸಂಖ್ಯೆ ಎಷ್ಟು ; ಅವುಗಳು ಯಾವುವು (ತಾಲ್ಲೂಕುವಾರು ವಿವರ ನೀಡುವುದು) ;

ಆ) ಈ ಪಶು ಆಸ್ಪತ್ರೆಗಳಲ್ಲಿ ಪಶುವೈದ್ಯರ ಮತ್ತು ಸಿಬ್ಬಂದಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಇ) ಹಾಗಿದ್ದಲ್ಲಿ, ಈ ಕೊರತೆಯನ್ನು ನೀಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಈ) ಮಂಡ್ಯ ಜಿಲ್ಲೆಯಲ್ಲಿ ಸ್ವಂತ ಕಟ್ಟಡವಿಲ್ಲದೇ ಬಾಡಿಗೆ ಕಟ್ಟಡಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪಶು ಆಸ್ಪತ್ರೆಗಳ ಸಂಖ್ಯೆ ಎಷ್ಟು (ತಾಲ್ಲೂಕುವಾರು ವಿವರ ನೀಡುವುದು);

ಉ) ಬಾಡಿಗೆ ಕಟ್ಟಡಗಳಲ್ಲಿರುವ ಪಶು ಆಸ್ಪತ್ರೆಗಳಿಗೆ ಪ್ರತಿ ತಿಂಗಳು ನೀಡುವ ಬಾಡಿಗೆ ಮೊತ್ತವೆಷ್ಟು (ಪೂರ್ಣ ವಿವರ ನೀಡುವುದು) ;

ಊ) ಪಶು ಆಸ್ಪತ್ರೆಗಳಿಗೆ ಸ್ವಂತ ಕಟ್ಟಡಗಳನ್ನು ಹೊಂದಲು ಸರ್ಕಾರಕ್ಕಿರುವ ತೊಂದರೆಗಳೇನು ?

ಶ್ರೀ ರೇವೂ ನಾಯಕ್ ಬೆಳಮಗಿ (ಪಶುಸಂಗೋಪನಾ ಸಚಿವರು):–

ಅ) 211, ತಾಲ್ಲೂಕುವಾರು ವಿವರವನ್ನು ಅನುಬಂಧ–1ರಲ್ಲಿ ನೀಡಿದೆ.

ಆ) ಹೌದು.

ಇ) ಖಾಲಿ ಹುದ್ದೆಗಳನ್ನು ತುಂಬಲು ಈ ಕೆಳಕಂಡಂತೆ ಕ್ರಮ ಕೈಗೊಳ್ಳಲಾಗಿದೆ.

1. ಪಶುವೈದ್ಯಾಧಿಕಾರಿ : ವಿಶೇಷ ನೇಮಕಾತಿ ನಿಯಮಗಳ ಮೂಲಕ 487 ಪಶುವೈದ್ಯಾಧಿಕಾರಿ ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳಲಾಗುತ್ತಿದ್ದು, ಮೊದಲ ಹಂತದಲ್ಲಿ 287 ಹುದ್ದೆಗಳನ್ನು ಭರ್ತಿ ಮಾಡಲು ನೇಮಕಾತಿ ಪ್ರಕ್ರಿಯೆ ಪ್ರಾರಂಭಿಸಲಾಗಿದೆ. ನೇಮಕಾತಿ ಪ್ರಕ್ರಿಯೆಗೆ ಕರ್ನಾಟಕ ಆಡಳಿತ ನ್ಯಾಯಮಂಡಳಿ ತಡೆಯಾಜ್ಞೆ ನೀಡಿದ್ದು, ತಡೆಯಾಜ್ಞೆ ತೆರವುಗೊಂಡ ನಂತರ ಹುದ್ದೆಗಳನ್ನು ಭರ್ತಿ ಮಾಡುವಾಗ ಮಂಡ್ಯ ಜಿಲ್ಲೆಯ ಖಾಲಿ ಇರುವ ಪಶುವೈದ್ಯಾಧಿಕಾರಿ ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳಲಾಗುವುದು.

2. ಹಿರಿಯ ಪಶುವೈದ್ಯ ಪರೀಕ್ಷಕರು :– ಪಶುವೈದ್ಯ ಪರೀಕ್ಷಕರ ಹುದ್ದೆಯಿಂದ ಹಿರಿಯ ಪಶುವೈದ್ಯ ಪರೀಕ್ಷಕರ ಹುದ್ದೆಗೆ ಮುಂಬಡ್ತಿ ನೀಡುವ ಪ್ರಕ್ರಿಯೆ ಚಾಲನೆಯಲ್ಲಿದ್ದು ಮುಂಬಡ್ತಿ ಸಂದರ್ಭದಲ್ಲಿ ಮಂಡ್ಯ ಜಿಲ್ಲೆಯಲ್ಲಿ ಖಾಲಿ ಇರುವ ಹಿರಿಯ ಪಶುವೈದ್ಯಕೀಯ ಪರೀಕ್ಷಕರ ಹುದ್ದೆಗಳನ್ನು ತುಂಬಲು ಕ್ರಮ ವಹಿಸಲಾಗುವುದು.

3. ಪಶುವೈದ್ಯ ಪರೀಕ್ಷಕರು :– 300 ಪಶುವೈದ್ಯ ಪರೀಕ್ಷಕರ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ಆಯ್ಕೆ ಮಾಡಲಾಗಿದ್ದು ನೇಮಕಾತಿ ಪ್ರಕ್ರಿಯೆ ಪ್ರಾರಂಭಿಸಲಾಗಿದೆ ಹಾಗೂ ಪಶುವೈದ್ಯಕೀಯ ಸಹಾಯಕರ ಹುದ್ದೆಯಿಂದ ಪಶುವೈದ್ಯಕೀಯ ಪರೀಕ್ಷಕರ ಹುದ್ದೆಗೆ ಮುಂಬಡ್ತಿ ನೀಡುವ ಪ್ರಕ್ರಿಯೆ ಚಾಲನೆಯಲ್ಲಿದೆ. ನೇಮಕಾತಿ ಮತ್ತು ಮುಂಬಡ್ತಿ ಸಂದರ್ಭದಲ್ಲಿ ಮಂಡ್ಯ ಜಿಲ್ಲೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ವಹಿಸಲಾಗುವುದು.

4. ಪಶುವೈದ್ಯ ಸಹಾಯಕರು :– ನೇರ ನೇಮಕಾತಿ ಮೂಲಕ 642 ಪಶುವೈದ್ಯ ಸಹಾಯಕರ ಹುದ್ದೆಗಳನ್ನು ತುಂಬಲು ಅನುಮತಿ ನೀಡಲಾಗಿದ್ದು, ನೇಮಕಾತಿ ಸಂದರ್ಭದಲ್ಲಿ ಮಂಡ್ಯ ಜಿಲ್ಲೆಯಲ್ಲಿ ಖಾಲಿ ಇರುವ ಪಶುವೈದ್ಯಕೀಯ ಸಹಾಯಕರ ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳಲಾಗುವುದು.

5. ದ್ವಿತೀಯ ದರ್ಜೆ ಸಹಾಯಕರು :– ನೇರ ನೇಮಕಾತಿ ಮೂಲಕ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗೆ ಭರ್ತಿ ಮಾಡುವ ಪ್ರಕ್ರಿಯೆ ಚಾಲನೆಯಲ್ಲಿದ್ದು, ನೇಮಕಾತಿ ಸಂದರ್ಭದಲ್ಲಿ ಮಂಡ್ಯ ಜಿಲ್ಲೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ತುಂಬಲು ಕ್ರಮ ವಹಿಸಲಾಗುವುದು.

6. ವಾಹನ ಚಾಲಕರು :– ಮಂಡ್ಯ ಜಿಲ್ಲೆಯಲ್ಲಿ ಖಾಲಿ ಇರುವ ವಾಹನ ಚಾಲಕರ ಹುದ್ದೆಗಳನ್ನು ಜಿಲ್ಲಾ ಉಪ ನಿರ್ದೇಶಕರ ಮೂಲಕ ಹೊರಗುತ್ತಿಗೆ ಆಧಾರದ ಮೇಲೆ ಹಾಗೂ ಎಸ್.ಎಸ್.ಎಲ್.ಸಿ. ಪಾಸು ಮಾಡಿರುವ ಮತ್ತು ವಾಹನ ಚಾಲನೆ ತರಬೇತಿ ಪಡೆದಿರುವ 'ಡಿ ದರ್ಜೆ' ನೌಕರರಿಗೆ ಮುಂಬಡ್ತಿ ನೀಡುವ ಮೂಲಕ ತುಂಬಲು ಕ್ರಮವಹಿಸಲಾಗುವುದು.

7. ಡಿ–ದರ್ಜೆ ನೌಕರರು :– ಮಂಡ್ಯ ಖಾಲಿ ಇರುವ 'ಡಿ ದರ್ಜೆ' ಹುದ್ದೆಗಳನ್ನು ಜಿಲ್ಲಾ ಉಪ ನಿರ್ದೇಶಕರ ಮುಖಾಂತರ ಹೊರ ಗುತ್ತಿಗೆ ಆಧಾರದ ಮೇರೆಗೆ ತುಂಬಲು ಕ್ರಮ ಕೈಗೊಳ್ಳಲಾಗುವುದು.

ಈ) 1 (ಒಂದು).

ಮಂಡ್ಯ ತಾಲ್ಲೂಕಿನ ಹೊಡಾಘಟ್ಟ ಗ್ರಾಮದ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ ಮಾತ್ರ ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ.

ಉ) ಮಾಹೆಯಾನ ರೂ. 700/–

ಊ) ಆರ್.ಐ.ಡಿ.ಎಫ್. ವತಿಯಿಂದ ಹಂತ ಹಂತವಾಗಿ ಸ್ವಂತ ಕಟ್ಟಡಗಳನ್ನು ನಿರ್ಮಿಸಲು ಕ್ರಮ ಜರುಗಿಸಲಾಗುತ್ತಿದೆ.

ಶ್ರೀ ಶ್ರೀನಿವಾಸ ಎಂ. ಮಾನ್ಯ ವಿಧಾನಸಭಾ ಸದಸ್ಯರು, ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 739ಕ್ಕೆ ಮಾಹಿತಿ

ಅನುಬಂಧ–1

ಕ್ರ. ಸಂ.	ತಾಲ್ಲೂಕು	ಪಶುಆಸ್ಪತ್ರೆ	ಪಶುಚಿಕಿತ್ಸಾಲಯ	ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ	ಇತರೆ ಸಂಸ್ಥೆಗಳು
1	2	3	4	5	6
1.	ಮಂಡ್ಯ	1. ಮಂಡ್ಯ 2. ಕೆರೆಗೋಡು 3. ಕೀಲಾರ 4. ಬಸರಾಳು	1. ಯಲಿಯೂರು 2. ಶಿವಳ್ಳಿ 3. ಗೊರವಾಲೆ 4. ಮಂಗಲ 5. ಅನಕೆರೆ 6. ಸಾತನೂರು 7. ಹೆಚ್.ಮಲ್ಲಿಗೆರೆ 8. ಕೊತ್ತತ್ತಿ 9. ತೂಬಿನಕೆರೆ 10. ಹುಲಿವಾನ 11 ಹೊಳಲು 12. ದುದ್ದ 13. ಹಿಂಡವಾಳು 14. ವಿ.ಸಿ.ಫಾರಂ 15. ಕ್ಯಾತಂಗೆರೆ 16. ಕೆ.ಗೌಡಗೆರೆ 17. ಹಳೆಬೂದನೂರು 18. ಕನ್ನಲಿ 19. ಹೊಸಹಳ್ಳಿ	1. ಶ್ರೀನಿವಾಸಪುರ 2. ಮುದಗಂಡೂರು 3. ಶಿವಪುರ 4. ಬೇಬಿ 5. ಬಿ.ಹೊಸೂರು 6. ತಗ್ಗಹಳ್ಳಿ 7. ಚಂದಗಾಲು 8. ಮಾರಗೌಡನಹಳ್ಳಿ 9. ಹಲ್ಲೇಗೆರೆ 10. ದೊಡ್ಡಗರುಡನ ಹಳ್ಳಿ 11. ತಂಡರಸನಹಳ್ಳಿ 12. ಗುತ್ತಲು 13.ಮಾದೇಗೌಡನ ಕೊಪ್ಪಲು 14. ಮುತ್ತೆಗೆರೆ 15. ಹೊಡಘಟ್ಟ 16. ಆಲಕೆರೆ 17. ಜಿಲಮಲ್ಲಿಗೆರೆ 18. ಬೂತನ ಹೊಸೂರು 19. ಹನಗನ ಹಳ್ಳಿ 20. ಬೇಲೂರು 21. ಚಾದೇಗಲು 22. ಕಾರಸವಾಡಿ	1.ಸಂಚಾರಿ ಪಶುಚಿಕಿತ್ಸಾಲಯ 2. ಪಾಲಿಕ್ಲಿನಿಕ್
2.	ಮದ್ದೂರು	1. ಮದ್ದೂರು 2. ಭಾರತಿನಗರ 3. ಬೆಸಗರಹಳ್ಳಿ	1. ಯಡಗನಹಳ್ಳಿ 2. ಕೊನ 3. ಚಂದುಪುರ 4. ಮಾದರಹಳ್ಳಿ 5. ಕಾಡುಕೊತ್ತನಹಳ್ಳಿ 6. ಕೆಸ್ತೂರು 7. ಕೆ.ಶೆಟ್ಟಹಳ್ಳಿ 8. ಬಿದರಕೋಟೆ 9. ಗೆಜ್ಜಲಗೆರೆ	1. ಕರಡಕೆರೆ 2. ಅಜ್ಜಹಳ್ಳಿ 3. ಬೊಪಸಮುದ್ದ 4. ಬಿದರ ಹೊಸಹಳ್ಳಿ 5. ಮುಟ್ಟನಹಳ್ಳಿ 6. ನಗರಕೆರೆ 7. ಸಾದೋಳಲು 8. ತೊರೆಬೊಮ್ಮನಹಳ್ಳಿ 9. ಗೊರವನಹಳ್ಳಿ 10. ಮೇಣಸಗೆರೆ 11. ಉಪ್ಪಿನಕೆರೆ	1. ಸಂಚಾರಿ ಪಶುಚಿಕಿತ್ಸಾಲಯ 2. ಕೃತಕ ಗರ್ಭಧಾರಣಾ ಕೇಂದ್ರ

1	2	3	4	5	6
			10. ಗುರುದೇವರಹಳ್ಳಿ 11. ಕೌಡ್ಲೆ 12. ಕವಲೂರು 13. ಬೆಳತೂರು 14. ಕೆ.ಹೊನ್ನಲಗೆರೆ 15. ಕೋಣಸಾಲೆ 16. ಯರಗನಹಳ್ಳಿ 17. ಹೆಬ್ಬೇರಳು 18. ತೈಲೂರು 19. ಬೆಕ್ಕಳಲೆ 20. ಹೊಸಗಾವಿ 21. ಒಳಗರ ಹಳ್ಳಿ 22. ಆಗಲಹಳ್ಳಿ 23. ದೊಡ್ಡರಸಿನಕೆರೆ 24. ಕೂಳಗೆರೆ 25. ಮುಳಹಳ್ಳಿ 26. ಹಳೇಹಳ್ಳಿ 27. ನಿಡಘಟ್ಟ 28. ಹೆಮ್ಮನಹಳ್ಳಿ		
3.	ಮಳವಳ್ಳಿ	1. ಮಳವಳ್ಳಿ 2. ಕಿರುಗಾವಲು 3. ಬೆಳಕವಾಡಿ 4. ನೆಲ್ಲಿಗೆರೆ 5. ಕ್ಯಾತೇಗೌಡನ ದೊಡ್ಡಿ	1. ಅಗಸನಪುರ 2. ಲಿಂಗಾಪಟ್ಟಣ 3. ಹಲಗೂರು 4. ಚನ್ನಪಿಳ್ಳೆಕೊಪ್ಪಲು 5. ಊರಿಗಾಲು 6. ರಾವಣಿ 7. ರಾಗಿಬೊಮ್ಮನಹಳ್ಳಿ 8. ಚೊಟ್ಟನಹಳ್ಳಿ 9. ಕುಂದೂರು 10. ಡಿ.ಅಲನಹಳ್ಳಿ 11. ಎತ್ತಂಬಾಡಿ 12. ತಳಗವಾಡಿ 13. ಹಾಡ್ಲಿಸರ್ಕಲ್ 14. ಬಂಡೂರು 15. ಪಂಡಿತನಹಳ್ಳಿ 16. ಹಿಟ್ನಳ್ಳಿಕೊಪ್ಪಲು	1. ನೆಲ್ಲೂರು 2. ನೆಟ್ಕಲ್ 3. ಹುಸ್ಕೂರು 4. ಸಾಗ್ಯ 5. ಕಂದೇಗಾಲ 6. ದುಗ್ಗನಹಳ್ಳಿ 7. ಬಿಜಿಪುರ 8. ವಡ್ಡರಹಳ್ಳಿ 9. ಮಾರಗೌಡನಹಳ್ಳಿ 10. ಕಲ್ಲುಣಿ 11. ತೊರೆಕಾರನಹಳ್ಳಿ 12. ಧನಗೂರು 13. ಡಿ.ಕೆ.ಹಳ್ಳಿ 14. ಅಮೃತೇಶ್ವರನಹಳ್ಳಿ ಕಾಲೋನಿ 15. ಮೇಗಳಾಪುರ 16. ಕೆ.ಗೌಡಗೆರೆ	1. ಪಾಲಿಕ್ಲಿನಿಕ್ 2. ಸಂಚಾರಿ ಪಶುಚಿಕಿತ್ಸಾಲಯ

1	2	3	4	5	6
				17. ಕರಲಕಟ್ಟಿ 18. ಸರಗೂರುಹ್ಯಾಂಡ್ ಪೋಸ್ಟ್ 19. ಗಟ್ಟಿಕೊಪ್ಪಲು 20. ನಿಟ್ಟೂರು 21. ಬಾಣಸಮುದ್ರ 22. ಭೂಹಳ್ಳಿ 23. ಬೆಂಡರವಾಡಿ 24. ದಾಸನದೊಡ್ಡಿ 25. ಹುಲ್ಲಹಳ್ಳಿ 26. ಚಿಕ್ಕಮುಲಗೂಡು	
4.	ಕೆ.ಆರ್.ಪೇಟೆ	1. ಕೆ.ಆರ್.ಪೇಟೆ 2. ಕೀಳನರೆ 3. ಕಿಕ್ಕೇರಿ	1. ಬೂಕನಕೆರೆ 2. ಮಾದಾಪುರ 3. ತೆಂಡೆಕೆರೆ 4. ಅಕ್ಕಿಹೆಬ್ಬಾಳು 5. ಸೋಮನಹಳ್ಳಿ ದಮ್ಮನಗುಡಿ 6. ಸಂತೇಬಾಚಹಳ್ಳಿ 7. ಸಿಂದಘಟ್ಟ 8. ಬಲ್ಲೇನಹಳ್ಳಿ 9. ವಿಠಲಾಪುರ 10. ಹರಿಯಾಲ	1. ಬಂಡಿಹೊಳೆ 2. ಹರಿಪುರ 3. ಮಂದಗೆರೆ 4. ಮೋದೂರು 5. ಅಘಲಯ 6. ಹರಳಹಳ್ಳಿ 7. ಬಳ್ಳೆಕೆರೆ 8. ಗಂಜಿಗೆರೆ 9. ಬೀರುಹಳ್ಳಿ	1. ಸಂಚಾರಿ ಪಶುಚಿಕಿತ್ಸಾಲಯ 2. ಕೃತಕ ಗರ್ಭಧಾರಣಾ ಕೇಂದ್ರ

1	2	3	4	5	6
5.	ಪಾಂಡವ–ಪುರ	1. ಪಾಂಡವಪುರ 2. ಮೇಲುಕೋಟೆ 3. ಚಿನಕುರಳಿ	1. ಕ್ಯಾತನಹಳ್ಳಿ 2. ಮಾಣಿಕ್ಯನಹಳ್ಳಿ 3. ಜಕ್ಕನಹಳ್ಳಿ 4. ಪಿ.ಎಸ್.ಎಸ್.ಕೆ.ಪಾಂಡವಪುರ 5. ಅರಳಕುಪ್ಪೆ 6. ಬನ್ನಾಂಗಾಡಿ	1. ಕೆ.ಬೆಟ್ಟಹಳ್ಳಿ 2. ನಾರಾಯಣಪುರ 3. ಸುಂಕತೊನ್ನುರು 4. ಲಕ್ಷ್ಮೀಸಾಗರ 5. ಚಿಕ್ಕಬ್ಯಾಡರಹಳ್ಳಿ	1. ಸಂಚಾರಿ ಪಶುಚಿಕಿತ್ಸಾಲಯ
6.	ಶ್ರೀರಂಗಪಟ್ಟಣ	1. ಶ್ರೀರಂಗಪಟ್ಟಣ 2. ಕೊಡಿಯಾಲ	1. ಮಹದೇವಪುರ 2. ಬಲ್ಲೇನಹಳ್ಳಿ 3. ಬೆಳಗೊಳ 4. ಅರಕೆರೆ 5. ಗಾಮನಹಳ್ಳಿ 6. ನಗುವನಹಳ್ಳಿ 7. ಕೆ.ಶೆಟ್ಟಿಹಳ್ಳಿ 8. ಪಾಲಹಳ್ಳಿ 9. ಕೆ.ಆರ್.ಎಸ್. 10. ಚಿಕ್ಕಂಕನಹಳ್ಳಿ 11.ಟಿ.ಎಂ. ಹೊಸೂರು	1. ದೊಡ್ಡಪಾಳ್ಯ 2. ಸಬ್ಬನಕುಪ್ಪ	1. ಸಂಚಾರಿ ಪಶುಚಿಕಿತ್ಸಾಲಯ
7.	ನಾಗಮಂಗಲ	1. ನಾಗಮಂಗಲ 2. ಕದಬಳ್ಳಿ 3. ಆದಿಚುಂಚನಗಿರಿ 4. ಬೆಳ್ಳೂರು	1. ಬಿಂಡಿಗನವಿಲೆ 2. ದೇವಲಾಪುರ 3. ಹಾಲ್ತಿ 4. ಹೊಣಕೆರೆ 5. ಹರದನಹಳ್ಳಿ 6. ಭೀಮನಹಳ್ಳಿ 7. ಭೋಗಾದಿ 8. ಬ್ರಹ್ಮದೇವರಹಳ್ಳಿ 9. ಟಿ.ಚನ್ನಾಪುರ	1. ಕೆಲಗೆರೆ 2. ಕಾಳಿಂಗನಹಳ್ಳಿ 3. ದೊಡ್ಡಜಟಕಾ 4. ಅಂಚೇಚಿಟ್ಟನಹಳ್ಳಿ 5. ಕಾಂತಪುರ 6. ಚಾಕೋನಹಳ್ಳಿ 7. ತಿರುಮಲಾಪುರ 8. ತಟ್ಟಿಕೆರೆ 9. ಬಿಂಡೆನಹಳ್ಳಿ 10. ಚೀಣ್ಯ 11. ದೊಡ್ಡಚಿಕ್ಕನಹಳ್ಳಿ 12. ಸಾತೇನಹಳ್ಳಿ 13. ಲಾಳನಕೆರೆ	1. ಸಂಚಾರಿ ಪಶುಚಿಕಿತ್ಸಾಲಯ